ಶ್ರೀ ಪಿ.ಬಿ. ಓಂಕಾರಮೂರ್ತಿ.—ಈಗ ಕಡೂರು ತಾಲ್ಲೂಕಿನಲ್ಲಿ ೧೦-೧೫ ಇಂಚ್‌ನಷ್ಟು ಮಾತ್ರ ಮಳೆ ಬರುತ್ತದೆ. ಆದರೂ ಸಹ ಅಲ್ಲಿರುವ ೩೦೦ ಗ್ರಾಮಗಳ ಪೈಕಿ ಕೇವಲ ೫೨ ಗ್ರಾಮಗಳನ್ನು ಮಾತ್ರ ಒಣ ಬೇಸಾಯ ಅಭಿವೃದ್ಧಿ ಮಂಡಳಿಯ ಕಾರ್ಯವ್ಯಾಪ್ತಿಗೆ ಸೇರಿಸಲು ಕಾರಣವೇನು? ಈ ೨೫೦ ಗ್ರಾಮಗಳಿಗೆ ಯಾವ ಸೌಲಭ್ಯವೂ ಸಿಗದಿರುವ ಕಾರಣದಿಂದ ಇವುಗಳನ್ನು ಸಹ ಈ ಒಣ ಬೇಸಾಯ ಅಭಿವೃದ್ಧಿ ಮಂಡಳಿಯ ಕಾರ್ಯವ್ಯಾಪ್ತಿಗೆ ಸೇರಿಸುತ್ತೀರಾ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೇ, ಈಗ ೫೨ ಗ್ರಾಮಗಳನ್ನೊಳಗೊಂಡ ಮುಗಳಿಕಟ್ಟೆ (ಯಾಗಟಿ ಬಸವನಹಳ್ಳಿ) ಜಲಾಯನ ಪ್ರದೇಶದಲ್ಲಿ ಭೂಅಭಿವೃದ್ಧಿ ಕಾರ್ಯಗಳನ್ನು ಪ್ರಾಯೋಗಿಕ ಆಧಾರದ ಮೇಲೆ ಕೈಗೊಳ್ಳಲಾಗಿದೆ. ಈ ಜಲಾಯನ ಪ್ರದೇಶದ ಕೊನೆಯ ಹಂತದಲ್ಲಿರುವವರಿಗೂ ಅನುಕೂಲವಾಗಬೇಕು ಮತ್ತು ಬರಗಾಲ ಪೀಡಿತ ಪ್ರದೇಶದ ಜನರಿಗೆ ಹೆಚ್ಚಿನ ಅನುಕೂಲವಾಗಬೇಕೆಂಬ ಕಾರಣದಿಂದ ಈ ಕೆಲಸವನ್ನು ಕೈಕೊಳ್ಳಲಾಗಿದೆ. ಈ ಒಂದು ಕಾರ್ಯಕ್ರಮ ಮುಗಿದನಂತರ ನಾವು ಮತ್ತೆ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುತ್ತೇವೆ.

ಘಟಪ್ರಭಾ ಮತ್ತು ಮಲಪ್ರಭಾ ಯೋಜನೆ ಬಗ್ಗೆ

೩೯ (೨೮೬ ಎ) ಚಂದ್ರಶೇಖರ ಪಾಮನಿ (ಸವದತ್ತಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಘಟಪ್ರಭಾ ಮತ್ತು ಮಲಪ್ರಭಾ ಯೋಜನೆಗೆ ಒಂದು ಮುಖ್ಯ ಅಭಿಯಂತರರವರ ಕಾರ್ಯಾಲಯ ಇದ್ದು, ಈ ಯೋಜನೆಯ ಕೆಲಸಗಳು ನಿಧಾನವಾಗಿ ಸಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಎರಡು ಯೋಜನೆಗಳನ್ನು ಬೇರ್ಪಡಿಸಿ ಮಲಪ್ರಭಾ ಯೋಜನೆಗೆ ಒಂದು ಪ್ರತ್ಯೇಕ ಮುಖ್ಯ ಅಭಿಯಂತರರನ್ನು ನೇಮಿಸಿ ಮಲಪ್ರಭಾ ಯೋಜನೆಯ ಕೆಲಸಗಳನ್ನು ಅತೀ ತೀವ್ರತೆಯಿಂದ ಪೂರ್ತಿಗೊಳಿಸಬೇಕೆಂಬ ವಿಚಾರ ಸರ್ಕಾರಕ್ಕೆ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಯೋಜನೆಗಳ ಕೆಲಸಗಳು ಸುಗಮವಾಗಿ ಸಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಚಂದ್ರಶೇಖರ ಪಾಮನಿ.—ನಾನು ಈ ಯೋಜನೆಯ ಕೆಲಸಗಳು ನಿಧಾನವಾಗಿ ಸಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಉತ್ತರವಾಗಿ 'ಈ ಯೋಜನೆಗಳ ಕೆಲಸಗಳು ಸುಗಮವಾಗಿ ಸಾಗುತ್ತಿದೆ' ಎಂದು ಹೇಳಿದ್ದಾರೆ. ಈ ಯೋಜನೆ ಪ್ರಾರಂಭವಾಗಿ ೨೫ ವರ್ಷಗಳಾಯಿತು. ಈ ಕೆಲಸ ಮುಗಿಯಲು ತಮಗೆ ಇನ್ನೂ ಎಷ್ಟು ಕಾಲಾವಕಾಶ ಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಮಲಪ್ರಭಾ ಯೋಜನೆಗೆ ಒಂದು ಪ್ರತ್ಯೇಕ ಮುಖ್ಯ ಅಭಿಯಂತರರನ್ನು ನೇಮಕ ಮಾಡುತ್ತೀರಾ ಎಂದು ಕೇಳಿದ್ದಾರೆ ? ಮತ್ತೊಬ್ಬರು ಮುಖ್ಯ ಅಭಿಯಂತರರನ್ನು ನೇಮಕ ಮಾಡುವುದರಿಂದಲೇ ಈ ಕೆಲಸ ಜಾಗ್ರತೆ ಮುಗಿಯುವುದಾದರೆ ನಾನು ನಾಳೆಯೇ ಈ ಕೆಲಸ ಮಾಡುತ್ತೇನೆ. ಇಲ್ಲಿ ಕೆಲಸ ಕುಂಠಿತವಾಗಿದೆ. ಈ ಕೆಲಸಕ್ಕೆ ಹೆಚ್ಚು ಹಣವನ್ನು ಕೊಟ್ಟರೆ, ಹಣದ ಖರ್ಚಿನ ಅಪಶ್ಯಕತೆ ನೋಡಿಕೊಂಡು ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗುತ್ತದೆಂಬುದನ್ನು ತಾವೂ ಒಪ್ಪುತ್ತೀರಿ ಮತ್ತು ಈ ಸದನ ಒಪ್ಪುತ್ತದೆ. ಎಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆ. ಈಗಿನ ಅಲೋಕೇಷನ್‌ಗಿಂತ ಇನ್ನೂ ಎರಡು ಮೂರು ಪಟ್ಟು ಹೆಚ್ಚು ಹಣ ಒದಗಿಸಿದರೆ, ಅದನ್ನು ಖರ್ಚು ಮಾಡಲು ಒಬ್ಬರು ಮುಖ್ಯ ಅಭಿಯಂತರರವರು ಸಾಕಾಗುವುದಿಲ್ಲ. ಆಗ ಇಬ್ಬರನ್ನು ನೇಮಕ ಮಾಡಬೇಕಾಗುತ್ತದೆ. ಈಗಿನ ಅಲೋಕೇಷನ್‌ಗೆ ಒಬ್ಬರೇ ಸಾಕು ಎಂಬುದು ಸರ್ಕಾರದ ಅಭಿಪ್ರಾಯವಾಗಿದೆ. ನೀರಾವರಿ ಇಲಾಖೆಯ ಡಿಮ್ಯಾಂಡ್‌ಗಳು ಚರ್ಚೆಗೆ ಬಂದಾಗ ಈಗಿನ ಅಲೋಕೇಷನ್‌ಗಿಂತ ೨-೩ ಪಟ್ಟು ಹೆಚ್ಚು ಹಣ ಕೊಡಬೇಕೆಂದು ನೀವೆಲ್ಲರೂ ಸೇರಿ ಒಂದು ನಿರ್ಣಯ ಮಾಡಿದರೆ ಇನ್ನೂ ಒಬ್ಬರನ್ನು ನೇಮಕ ಮಾಡೋಣ.

ಶ್ರೀ ಚಂದ್ರಶೇಖರ ಪಾಮನಿ.—ನಮ್ಮ ಭಾಗದಲ್ಲಿ ಒಂದು ಲಿಫ್ಟ್ ಇರಿಗೇಷನ್ ಕೆಲಸ ಆಗಬೇಕೆಂದು ನಾನು ತಮಗೆ ಬರೆದಿದ್ದೆ. ಅದಕ್ಕೆ ತಾವು ಇಲ್ಲಿ ಉತ್ತರ ಕೊಟ್ಟಿಲ್ಲ. ತಾವು ಸೌಂದತ್ತಿಗೆ

ಬಂದಿದ್ದಾಗ ಸಹ ತಮಗೆ ಹೇಳಿದ್ದೆ. ಆದರೆ ತಾವು ತರಹದ ಉತ್ತರ ಕೊಡಲಿಲ್ಲ. ಈ ಸದನದಲ್ಲಿ ಯಾದರೂ ತಾವು ಉತ್ತರ ಕೊಡಬೇಕು ?

ಶ್ರೀ ಹೆಚ್. ಡಿ. ದೇವೇಗೌಡ —ಮಾನ್ಯ ಸದಸ್ಯರ ಪ್ರಶ್ನೆ ಇಲ್ಲಿ ಉದ್ಭವಿಸದೇ ಇದ್ದರೂ ಸಹ, ಅವರು ಹೇಳಿರುವಂಥ ಬದರಿ ಕಟ್ಟೆಹಳ್ಳಿ ಯೋಜನೆಯ ಬಗ್ಗೆ ಸರ್ಕಾರ ಶೀಘ್ರವಾಗಿ ನಿರ್ಣಯ ಕೈಗೊಳ್ಳುತ್ತದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಅರಕಲಗೂಡು ತಾಲ್ಲೂಕಿನಲ್ಲಿ ದುರಸ್ತಿ ಕಾಮಗಾರಿಗಳು

೨೫ (೩೪೫) ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಅರಕಲಗೂಡು ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ದುರಸ್ತಿಗಾಗಿ ಮಂಜೂರು ಮಾಡಲಾಗಿದೆ ?

ಆ) ಎಷ್ಟು ಕೆಲಸಗಳು ಪ್ರಾರಂಭಗೊಂಡು ಮುಗಿದಿವೆ ?

ಇ) ಕಾರ್ಯರೂಪಕ್ಕೆ ತಂದ ಕೆಲಸಗಳಿಗೆ ಈವರೆಗೆ ಎಷ್ಟು ಹಣ ಪಾವತಿಯಾಗಿರುತ್ತದೆ ?

ಈ) ಪಾವತಿ ಮಾಡಬೇಕಾದ ಬಾಕಿ ಹಣ ಎಷ್ಟು ?

ಉ) ಪಾವತಿ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೭೫.

ಆ) ೫೬.

ಇ) ೫,೧೩,೨೨೬ ರೂ.ಗಳು.

ಈ) ೨,೮೮,೨೩೦ ರೂ.ಗಳು.

ಉ) ಪಾವತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಎರಡನೆ ಪಟ್ಟಿಯನ್ನು ಸಭೆಯ ಮುಂದಿಡುವುದು.

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಅಧ್ಯಕ್ಷರೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಎರಡನೆ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಕೋಲಾರ ಜಿಲ್ಲೆಯಲ್ಲಿನ ನೀರಾವರಿ ಯೋಜನೆಗಳ ಬಗ್ಗೆ

೧೧ (೭೬) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೫-೮೬, ೧೯೮೬-೮೭ನೇ ಸಾಲುಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಎಷ್ಟು ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಳ್ಳಲಾಗಿದೆ (ತಾಲ್ಲೂಕುವಾರು ಹಾಗೂ ಯೋಜನಾವಾರು ಅಂದಾಜುಗಳನ್ನು ನೀಡುವುದು).

ಆ) ಸದರಿ ಯೋಜನೆಗಳಲ್ಲಿ ಚಾಲ್ತಿ ವರ್ಷದ ಆಯವ್ಯಯದಲ್ಲಿ ಎಷ್ಟನ್ನು ಸೇರಿಸಲಾಗಿದೆ ಹಾಗೂ ಎಷ್ಟು ಹಣ ಮಿಾಸಲಿರಿಸಲಾಗಿದೆ ಮತ್ತು ಚಾಲ್ತಿ ವರ್ಷದಲ್ಲಿ ಎಷ್ಟು ಹಣ ವೆಚ್ಚ ಮಾಡಲಾಗಿದೆ ?

ಇ) ಆಯವ್ಯಯದಲ್ಲಿ ಸೇರಿಸದೆ ಹೊರಗೆ ಉಳಿದಿರುವ ಯೋಜನೆಗಳು ಎಷ್ಟು ?